ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ. 850/2014

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಮುಹಿಬುಲ್ ಷರೀಪ್ ಉಃ ಮುಸರೂ | ದಿನಾಂಕಃ **19.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಉಬೇದುಲ್ಲಾ ಷರೀಪ್ | |
| ವಯಸ್ಸು | : | 27 ವರ್ಷ | |
| ಉದ್ಯೋಗ | : | ಕೂಲಿಕೆಲಸ | **CW-2** |
| ವಾಸಸ್ಥಳ | : | ಕೌಲಂದೆ ಗ್ರಾಮ, ನಂಜನಗೂಡು ತಾಲ್ಲೂಕು. | **PW-8** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಚಾಸಾ 1 ಮತ್ತು ಮೃತ ಅಪ್ಪಾಜಿಯವರು ಗೊತ್ತು. ಸುಮಾರು 15 ವರ್ಷದ ಹಿಂದೆ ಕೆಲಸದ ನಿಮಿತ್ಯ ನಾನು ಚಾಮರಾಜನಗರದ ಕರ್ನಾಟಕ ಲೇತ್ ಅಂಗಡಿಗೆ ಕೆಲಸದ ನಿಮಿತ್ಯ ಹೋಗಿದ್ದು ನಾನು ಊರಿಗೆ ಮರಳಿ ಹೋಗುವ ಸಲುವಾಗಿ ರಾತ್ರಿ 8.00 ಗಂಟೆಗೆ ಭಾಗ್ಯ ಹೋಟೆಲ್ ಬಳಿ ನಿಂತಾಗ ಚಾಸಾ 1 ರವರು ಪಲ್ಸರ್ ವಾಹನದಲ್ಲಿ ಅಲ್ಲಿಗೆ ಬಂದಿರುತ್ತಾರೆ. ನಾನು ಅವರಿಗೆ ಡ್ರಾಪ್ ಕೊಡಲು ಕೇಳಿಕೊಂಡಿರುತ್ತೇನೆ. ಸದರಿಯವರ ಬೈಕ್ ಹತ್ತಿರುತ್ತೇನೆ. ಅದೇ ಸಮಯಕ್ಕೆ ಮೃತ ಅಪ್ಪಾಜಿಯವರು ಅಲ್ಲಿಗೆ ಊರಿಗೆ ಹೋಗಲು ಬಸ್ ಇಲ್ಲ ನನ್ನನ್ನು ಹೆಗ್ಗವಾಡಿ ಗ್ರಾಮದ ಕಡೆ ಬಿಡಿ ಎಂದು ಕೇಳಿಕೊಂಡಿದ್ದರಿಂದ ಮಹದೇವ್ ರವರು ಅವರಿಗೆ ವಾಹನದಲ್ಲಿ ಕುಳಿತುಕೊಳ್ಳಲು ಹೇಳಿರುತ್ತಾರೆ. ರಾತ್ರಿ 8.15 ಗಂಟೆಗೆ ರೈಲ್ವೆ ಗೇಟ್ ಬಳಿ ಎದುರುಗಡೆಯಿಂದ ಒಂದು ಬಸ್ ಕಾರನ್ನು ಓವರ್ ಟೇಕ್ ಮಾಡಿ ಎದುರಿನಿಂದ ನಾವುಹೋಗುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿರುತ್ತದೆ. ಸದರಿ ಅಪಘಾತದಲ್ಲಿ ನಾವೆಲ್ಲರೂ ಕೆಳಗೆ ಬಿದಿದ್ದು ನನ್ನ ಬಲಗಾಲಿಗೆ ಮತ್ತು ತಲೆಗೆ ಗಾಯಗಳಾಗಿತ್ತು. ಚಾಸಾ 1 ರವರಿಗೆ ಮೈಕೈಗೆ ಗಾಯಗಳಾಗಿದ್ದವು. ಅಪ್ಪಾಜಿಯವರನ್ನು ಚಾಮರಾಜನಗರ ಆಸ್ಪತ್ರೆಗೆ ಸೇರಿಸಲಾಗಿದ್ದು ಮಾರನೇ ದಿನ ಅವರು ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಮೃತ ಅಪ್ಪಾಜಿಯವರು ಶಾಲಾ ಶಿಕ್ಷಕರಾಗಿದ್ದರು ಎಂದು ನನಗೆ ತಿಳಿದುಬಂದಿರುತ್ತದೆ. ಸದರಿ ಅಪಘಾತವು ಬಸ್ಸಿನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿ ನಿಪಿ 9 ರಿಂದ 12 ರಲ್ಲಿರುವ ಬಸ್ಸು ಮತ್ತು ಬೈಕನ್ನು ನೋಡಿ ಗುರುತಿಸಿರುತ್ತಾರೆ. ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಾಗಿದ್ದು ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ ಎಸ್ ವಕೀಲರಿಂದಃ

ಚಾಮರಾಜನಗರ–ನಂಜನಗೂಡು ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಚಾಮರಾಜನಗರದಿಂದ ಹೋಗುವಾಗ ಮೇಲು ಸೇತುವೆ ಮೂಲಕ ಹೋಗಬೇಕು ಎಂದರೆ ಸರಿ. ಸದರಿ

ಸೇತುವೆಯು ಮೂಲ ರಸ್ತೆಗಿಂತ ಕಿರಿದಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಓವರ್ ಟೇಕ್ ಮಾಡಲು ಆಗುವುದಿಲ್ಲ ಎಂದರೆ ಸರಿ. ಸದರಿ ಅಪಘಾತವಾದ ಸ್ಥಳದಲ್ಲಿ ಬಸ್ ನಿಲ್ದಾಣವಿದೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣವಿದ್ದು ಮೃತನ ಪರಿವಾರದವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ವಾಹನದ ಮಧ್ಯದಲ್ಲಿ ನಾನು ಕುಳಿತಿದ್ದು ನನ್ನ ಹಿಂದೆ ಅಪ್ಪಾಜಿಯವರು ಕುಳಿತಿದ್ದರು. ದ್ವಿಚಕ್ರವಾಹನದಲ್ಲಿ ಇಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳು ಪ್ರಯಾಣಿಸುವಂತಿಲ್ಲ ಎಂದರೆ ಸರಿ. ಸುಮಾರು 20 ಅಡಿ ಅಂತರದಲ್ಲಿ ಬಸ್ ಇದ್ದಾಗ ಓವರ್ ಟೇಕ್ ಮಾಡಲಾಗಿರುತ್ತದೆ. ರಾತ್ರಿ ವೇಳೆಯಲ್ಲಿ ಅಪಘಾತವಾಗಿದ್ದು ಎರಡೂ ವಾಹನಗಳ ಬೆಳಕಿನ ತೀವ್ರತೆ ಇದ್ದ ಕಾರಣ ಅಪಘಾತ ಹೇಗೆ ಆಯಿತು ಎಂದು ನನಗೆ ನಿರ್ದಿಷ್ಟವಾಗಿ ಕಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ 1 ರವರು ಹೆಲ್ಮೇಟ್ ಧರಿಸಿರಲ್ಲಿಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಚಾಸಾ 1 ರವರು ಹೆಲ್ಮೇಟ್ ಧರಿಸಿದ ಬಗ್ಗೆ ಹೇಳಿರುವುದಿಲ್ಲ.

ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿದ್ದು ಯಾವಾಗಲ್ಲೂ ವಾಹನ ನಿಬಿಡ ರಸ್ತೆ ಎಂದರೆ ಸರಿ. ಸದರಿ ಮೇಲು ಸೇತುವೆಯ ದಾರಿಯು ಕಿರಿದಾಗಿದ್ದು ವಾಹನವನ್ನು ಅತಿವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಮೂರು ಜನ ವಾಹನದಲ್ಲಿ ಪ್ರಯಾಣಿಸುತ್ತಿದ್ದು ವಾಹನ ನಿಯಂತ್ರಿಸಲು ಆಗದೆ ಕೆಳಗೆ ಬಿದ್ದು ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ 1 ರವರ ನಿರ್ಲಕ್ಷತೆಯಿಂದ ಅಪಘಾತವಾಗಿದ್ದು ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲೀಸರು ಹೇಳಿಕೆ ನೀಡುವ ಕುರಿತು ನನಗೆ ಲಿಖಿತ ನೋಟೀಸ್ ಜಾರಿ ಮಾಡಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರದಿದ್ದರು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.